# ಪಂಜರ ಶಾಲೆ

ಶಿಕ್ಷಣದ ಮೂಲ ಗುರಿ ವೈಜ್ಞಾನಿಕ ದೃಷ್ಟಿ, ವೈಚಾರಿಕತೆ, ನೈತಿಕತೆ ಹಾಗೂ ಮಾನವೀಯ ನಡವಳಿಕೆಯನ್ನು ವ್ಯಕ್ತಿಯಲ್ಲಿ ತರುವುದು. ಹಾಗೂ ಎಲ್ಲ ಬಗೆಯ ಪೂರ್ವಗ್ರಹಗಳಿಂದ ಮುಕ್ತನಾಗಿ ಎಲ್ಲರನ್ನೂ ತನ್ನವರೆಂದೇ ಬಗೆಯುವ ವ್ಯಕ್ತಿಯ ನಿರ್ಮಾಣ. ಇತಿಹಾಸದ ಪುಟಗಳನ್ನು ತೆರೆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಕರೆಗೆ ತಮ್ಮ ವಿದ್ಯಾಭ್ಯಾಸವನ್ನೇ ತೊರೆದ ಸಾವಿರಾರು ವಿದ್ಯಾರ್ಥಿಗಳು ವಿಮೋಚನೆಯ ಹೋರಾಟದಲ್ಲಿ ಪಾಲ್ಗೊಂಡರು. ಇದೇ ವೇಳೆ ರಾಷ್ಟ್ರಕ್ಕಾಗಿ ಅನೇಕ ವಿದ್ಯಾರ್ಥಿಗಳು ಸಾವನ್ನಪ್ಪಿದರ ಸಾವಿರಾರು ಉದಾಹರಣೆಗಳು ಸಿಗುತ್ತವೆ. ಇಂತಹವರನ್ನೆ ಕುರಿತು ಪ್ರಭುದೇವರು 'ಕುಲಮದ ಛಲಮದ ವಿದ್ಯಾಮದದವರ ತೋರದಿರಾ! ಅವರ ಆರೂಢಪದವಿಯನೆನಗೆ ತೋರದಿರಾ! ಅವರ ಗರುವ ಗಂಭೀರತನವನೆನಗೆ ತೋರದಿರಾ..' ಎಂದಿದ್ದಾರೆ.

ಅವಕಾಶವಿಹೀನರಿಗಾಗಿ ಮಿಡಿಯುವ, ತಮ್ಮ ಕುಟುಂಬಕ್ಕೂ ಸಮಾಜಕ್ಕೂ ಉತ್ತರದಾಯಿಗಳಲ್ಲದ ವಿದ್ಯಾರ್ಥಿ ಸಮುದಾಯ ಇಂದು ಸೃಷ್ಟಿಯಾಗುತ್ತಿದೆ. ಹಿಂಸೆ, ಪರಮತ ನಿಂದೆ, ತನ್ನ ಸಹವರ್ತಿಗಳ ಬಗೆಗಿನ ತರ್ಕಹೀನ ದ್ವೇಷ, ದುರ್ಬಲ ಸಮುದಾಯಗಳ ವಿರುದ್ಧದ ನಡೆ ಇವು ಶಿಕ್ಷಣದ ಗುರಿಯಲ್ಲ ಎಂಬುದನ್ನು ಅವರಿಗೆ ತಿಳಿಯ ಹೇಳುವವರು ಯಾರು?

ದೇಶದುದ್ದಕ್ಕೂ ನಡೆಯುತ್ತಿರುವ ಅನೇಕ ಗಲಭೆಗಳು, ಸಮಾಜದ್ರೋಹಿ ಕೃತ್ಯಗಳು, ಅನ್ಯ ಸಮುದಾಯದ ವಿದ್ಯಾರ್ಥಿಗಳ ಮೇಲಿನ ಆಕ್ರಮಣ ಇವನ್ನೆಲ್ಲಾ ನೋಡುತ್ತಿದ್ದರೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೇನೊ ಮೂಲಭೂತ ದೋಷವಿದೆ ಎನಿಸುತ್ತದೆ. ಶಿಕ್ಷಣವೆಂಬುದು ಹಣದ ಥೈಲಿಯನ್ನ ತರುವ ಒಂದು 'ಉದ್ದಿಮೆ'ಯಾಗಿರುವ ವಿಕಟ ಸನ್ನಿವೇಶದಲ್ಲಿ ನಾವಿದ್ದೇವೆ. ಯಾವುದೇ ಮಾರ್ಗವಾದರೂ ಸರಿಯೇ ಹಣ ಮತ್ತು ಅಧಿಕಾರವನ್ನು ಗಳಿಸುವುದೇ ಶಿಕ್ಷಣದ ಗುರಿಯಾಗಿರುವ ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ವ್ಯವಸ್ಥೆ ಏನನ್ನು ತಾನೆ ಬೋಧಿಸುತ್ತಿರಬಹುದು! ಅದಕ್ಕೆಂದೇ ಲಾವೋತ್ಸೆ ಹೇಳಿದ 'ಜ್ಞಾನ ಸದ್ಗುಣವಲ್ಲ: ಇದಕ್ಕೆ ವಿಪರ್ಯಾಸವಾಗಿ ವಿದ್ಯೆ ಹರಡಿದಂತೆ ಮೋಸಗಾರರು ಹೆಚ್ಚುತ್ತಿದ್ದಾರೆ. ಜ್ಞಾನವೇ ವಿವೇಕವಲ್ಲ. ಸಂತನಿಗಿಂತ ಬುದ್ಧಿಜೀವಿ ಒಂದು ಮೆಟ್ಟಿಲು ಕೆಳಗಿರುತ್ತಾನೆ'.

ಶಿಕ್ಷಣದ ಬಗ್ಗೆ ಗುರು ರವೀಂದ್ರನಾಥರ ವಿಚಾರಗಳು ಇಂದಿನ ಹೊಲಬುಗೆಟ್ಟ ಶಿಕ್ಷಣ ವ್ಯವಸ್ಥೆಗೆ ದಾರಿಯನ್ನು ತೋರುವ 'ಕೈಮರ'ಗಳಾಗಬಹುದು. 'ಒತ್ತಾಯಗಳನ್ನು ಹೇರುವುದರ ಬದಲು ಸ್ವಾತಂತ್ರ್ಯವನ್ನೀಯುವುದು, ನಿಸರ್ಗದೊಡನೆ ಹೇರಳವಾದ ಸಂಬಂಧಗಳನ್ನು ಇಟ್ಟುಕೊಳ್ಳುವುದು, ಚಿಕ್ಕ ಬಾಲಕರ ವಿಕಾಸಕ್ಕೆ ಉತ್ತಮ ಸಾಧನಗಳು' ಎಂದು ರವೀಂದ್ರನಾಥ ಟ್ಯಾಗೋರರು ಹೇಳುತ್ತಾರೆ. ರವೀಂದ್ರರು ಹೇಳುವ ಶಿಕ್ಷಣದಲ್ಲಿ ಸಂಕುಚಿತ ಭಾವನೆಗಳಿಗೆ ಅವಕಾಶಗಳಿರುವುದಿಲ್ಲ. ಮಾನವನ ಯಾವುದೇ ಗುಣವನ್ನೂ ಅಡಗಿಸಬಾರದು. ಸರ್ವಾಂಗೀಣ ವಿಕಾಸವೇ ಶಿಕ್ಷಣದ ಲಕ್ಷಣವೆಂದು ಹೇಳಿದ್ದರು. ಇದೇ ಶಿಕ್ಷಣದ ಅಸಲೀ ಸೌಂದರ್ಯ ಮತ್ತು ಅದು ನಮಗೆ ಹೇಳಿಕೊಡುವ ಉತ್ಕಟ ಪ್ರಾರ್ಥನೆ.

ಶಿಕ್ಷಣ ವ್ಯವಸ್ಥೆ ಇಂದು ನಮಗೆ ಏನನ್ನು ಹೇಳಿಕೊಡುತ್ತಿದೆ ಎಂಬುದನ್ನು 'ಗಿಳಿಯ ಕಥೆ'ಯಲ್ಲಿ ರವೀಂದ್ರರು ಹೀಗೆ ಹೇಳಿದ್ದಾರೆ. ಅದರ ಸಂಕ್ಷಿಪ್ತ ರೂಪ ಹೀಗಿದೆ: ಒಂದು ಪಕ್ಷಿಯಿತ್ತು. ಅದಕ್ಕೆ ಓದಲು ಬರುತ್ತಿರಲಿಲ್ಲ. ಅದನ್ನು ನೋಡಿದ ಆ ಊರಿನ ರಾಜ ತನ್ನ ಸೋದರಳಿಯನನ್ನು ಕರೆದು ಈ ಪಕ್ಷಿಗೆ ಬುದ್ಧಿ ಕಲಿಸು ಎಂದ. ಅದರಂತೆಯೇ ಅಲ್ಲಿನ ಪಂಡಿತರಿಗೆ ಕರೆ ಹೋಯಿತು. ಎಲ್ಲರೂ ಬಂದರು. ಅವರು ಹುಲ್ಲು ಗೂಡಿನಲ್ಲಿದ್ದ ಪಕ್ಷಿಯ ಸ್ಥಿತಿಯನ್ನು ನೋಡಿ ಪಕ್ಷಿಯ ಸ್ಥಿತಿಗೆ ಈ ಹುಲ್ಲುಗೂಡೇ ಕಾರಣವೆಂದು ಹೇಳಿ, ಅದಕ್ಕೊಂದು ಬಂಗಾರದ ಪಂಜರ ಮಾಡಿಸಬೇಕೆಂದು ಹೇಳಿ ರಾಜನಿಂದ ತಕ್ಕ ಇನಾಮು ಪಡೆದು ಹೋದರು. ಅದ್ಭುತವಾದ ಕುಸುರಿ ಮಾಡಿದ ಬಂಗಾರದ ಪಂಜರವೊಂದು ತಯಾರಾಯಿತು. ಅಕ್ಕಸಾಲಿ ರಾಜನಿಂದ ಇನಾಮು ಪಡೆದು ಹೋದ. ಜಗತ್ತಿನ ಎಲ್ಲ ಕಡೆಯಿಂದಲೂ ಬಂಗಾರದ ಪಂಜರವನ್ನು ನೋಡಲು ಜನ ಆಗಮಿಸಿದರು. ಅರಮನೆಯಲ್ಲಿದ್ದ ಅನೇಕ ಪಂಡಿತರು ತಮ್ಮಲ್ಲಿದ್ದ ನೂರಾರು ಗ್ರಂಥಗಳನ್ನು ತಂದು ಪಕ್ಷಿಯ ಮುಂದೆ ಸುರಿದರು. ಇದನ್ನು ನೋಡಿದ ಜನರಿಗೆ ಅತೀವ ಸಂತೋಷವಾಯಿತು. ಪಕ್ಷಿ ಎಷ್ಟೊಂದು ಗ್ರಂಥಗಳನ್ನು ಓದಿದೆ ಎಂದು ಸಂತಸಪಟ್ಟರು. ಪಂಡಿತರು ಭಾರೀ ಇನಾಮು ಪಡೆದರು. ಹೀಗೆ ಶಿಕ್ಷಣದ ಪ್ರಗತಿಯು ಭಾರೀ ವೇಗದಿಂದ ಸಾಗಿತು. ರಾಜನಿಗೆ ಪಕ್ಷಿ ಹೇಗಿದೆ ಎಂಬುದನ್ನು ನೋಡಿ ತಿಳಿದುಕೊಳ್ಳುವ ಮನಸ್ಸಾಯಿತು. ಒಂದು ದಿನ ತನ್ನ ಆಪ್ತೇಷ್ಟರೆಲ್ಲರನ್ನೂ ಕರೆದುಕೊಂಡು ಪಕ್ಷಿಯ ಬಳಿಗೆ ಬಂದ. ರಾಜನಿಗೆ ಸಂತೋಷವಾಯಿತು. ಆಗ ಯಾರೋ ಬಂದು 'ಮಹಾರಾಜ ಪಕ್ಷಿಯ ನೋಡಿದಿರೇನು?' ಎಂದು ಕೇಳಿದ. ಪಕ್ಷಿಯ ಮುಂದೆ ಬಿದ್ದಿದ್ದ ಗ್ರಂಥರಾಶಿಯನ್ನು ನೋಡಿ 'ಇಷ್ಟೊಂದು ಓಲೆಗರಿ, ಶಾಸ್ತ್ರ ಗ್ರಂಥಗಳನ್ನು ನೋಡಿದ ಮೇಲೆ ಪಕ್ಷಿಯನ್ನು ನೋಡದಿದ್ದರೂ ಚಿಂತೆಯಿಲ್ಲ' ಎಂದು ರಾಜ ಹೇಳಿದ.

ಪಕ್ಷಿಗೆ ತಿನ್ನಲು ಕಾಳು–ಕಡ್ಡಿ, ಕುಡಿಯಲು ನೀರು ಇಲ್ಲದಿದ್ದರೇನಾಯಿತು, ಅದಕ್ಕೆ ತಿನ್ನಲು ರಾಶಿ ರಾಶಿ ಗ್ರಂಥಗಳಿದ್ದವು. ಪಂಡಿತರು ಒಂದು ಕೈಯಲ್ಲಿ ಓಲೆಗರಿಗಳು, ಇನ್ನೊಂದು ಕೈಯಲ್ಲಿ ಬೆತ್ತ ಹಿಡಿದು ಪಕ್ಷಿಗೆ ಪಾಠ ಹೇಳಲಾರಂಭಿಸಿದರು. ಇದನ್ನೆಲ್ಲಾ ನೋಡಿಕೊಳ್ಳುತ್ತಿದ್ದ ಕೊತ್ವಾಲನಿಗೂ ರಾಜನಿಂದ ಇನಾಮು ಸಿಕ್ಕಿತು. ಗ್ರಂಥದ ಓಲೆಗಳನ್ನು ತಿಂದು ತಿಂದು ಪಕ್ಷಿಯ ಗಂಟಲು ಕಟ್ಟಿತು. ಅದು ಕೂಗುವುದಿರಲಿ, ಪಿಸುಗುಡುವುದಕ್ಕೂ ತ್ರಾಣವಿರಲಿಲ್ಲ. ಹೀಗೆ ಹಕ್ಕಿ ನಿಧಾನವಾಗಿ ಅಂತಿಮ ಹಂತದ ಸ್ಥಿತಿಗೆ ತಲುಪಿ ಸತ್ತುಹೋಯಿತು. ಈ ಸುದ್ದಿ ಊರಿನಲ್ಲೆಲ್ಲಾ ಹರಡಿತು. ರಾಜ ತನ್ನ ಸೋದರಳಿಯನನ್ನು ಕರೆದು 'ಈ ಸುದ್ದಿ ನಿಜವೇ' ಎಂದು ಕೇಳಿದ. ಅದಕ್ಕೆ ಸೋದರಳಿಯ 'ಪಕ್ಷಿಯ ಶಿಕ್ಷಣವು ಪೂರ್ಣಗೊಂಡಿದೆ ರಾಜ' ಎಂದು ಉತ್ತರಿಸಿದ. ಹಾಗಾದರೆ 'ಅದು ಕುಪ್ಪಳಿಸುತ್ತದೆಯೆ?' ಎಂದು ಕೇಳಿದ. 'ಎಂದಿಗೂ ಇಲ್ಲ' ಎಂದ ಸೋದರಳಿಯ. 'ಹಾರಬಲ್ಲದೆ?' ಎಂದು ರಾಜ ಕೇಳಿದ. 'ಇಲ್ಲ' ಎಂದ ಸೋದರಳಿಯ ಹೇಳಿದ. 'ಆ ಹಕ್ಕಿಯನ್ನು ಇಲ್ಲಿಗೆ ತನ್ನಿ' ಎಂದು ರಾಜ ಆಜ್ಞಾಪಿಸಿದ. ಅರಮನೆಯ ಸಿಪಾಯಿಗಳು ಕಾವಲಿನಲ್ಲಿ ಪಕ್ಷಿಯನ್ನು ತಂದರು. ರಾಜ ಬೆರಳಿನಿಂದ ಅದರ ಮೈಯನ್ನು ಚುಚ್ಚಿದ. ಆಗ ಪಕ್ಷಿಯ ದೇಹದಲ್ಲಿ ತುಂಬಿದ್ದ ಓಲೆಗರಿಗಳು, ಗ್ರಂಥಗಳು ಪರ ಪರ ಎಂದು ಶಬ್ದಮಾಡಿದವು.

ಹೀಗೆ ಈ ಕಥೆ ನಮ್ಮ ಇಂದಿನ ಬೋಧನಾ ವ್ಯವಸ್ಥೆಯ ನಿಸ್ಸಾರತೆಯನ್ನು ನಮಗೆ ರೂಪಕದ ಮೂಲಕ ವಿವರಿಸುತ್ತದೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ವಿದ್ಯೆಯೊಂದಿಗೆ ಆದರ್ಶ ಗುಣಗಳು ನಿನ್ನಲ್ಲಿ ಬರದಿದ್ದರೆ ನೀನು ಓದಿದ್ದು ವ್ಯರ್ಥ.
  —ಪ್ರೇಮಚಂದ್
- ಮಹಾಕಾರ್ಯಗಳನ್ನು ಮಹಾತ್ಯಾಗದಿಂದ ಮಾತ್ರ ಸಾಧಿಸಲು ಸಾಧ್ಯ. ಅನ್ಯಾಯದ ಸ್ಥಾನವು ಅಭದ್ರವಾದುದು. ಅದರಿಂದ ಏಳಿಗೆ ಆಗದು.
  —ಸ್ವಾಮಿ ವಿವೇಕಾನಂದ
- ನಿಜವಾದ ಸೋಲು ಪ್ರತಿಸ್ಪರ್ಧಿಗಳಿಂದ ಸಂಭವಿಸುವ ಪರಾಜಯವಲ್ಲ. ನಮ್ಮಲ್ಲಿ, ನಮ್ಮ ಸಾಹಸದಲ್ಲಿ, ನಮ್ಮ ಶ್ರದ್ಧೆಯಲ್ಲಿ ನಮಗೆ ನಂಬಿಕೆ ಹೋಗುವುದು.
  —ತ.ರಾ.ಸು.
- ಒಬ್ಬ ಶಿಕ್ಷಕ ತಾನು ಕಲಿಯದೆ ಇನ್ನೊಬ್ಬರಿಗೆ ಕಲಿಸಲಾರ. ತಾನು ಉರಿಯದ ದೀಪ ಇನ್ನೊಂದು ದೀಪವನ್ನು ಬೆಳಗಿಸಲಾರದು.
  —ರವೀಂದ್ರನಾಥ್ ಟ್ಯಾಗೋರ್
- ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು.
  —ಬಸವಣ್ಣ
- ಒಬ್ಬ ಪರಿಪೂರ್ಣ ವ್ಯಕ್ತಿಯ ಮನಸ್ಸು ಕನ್ನಡಿಯಂತೆ. ಎಲ್ಲವನ್ನೂ ಪ್ರತಿಬಿಂಬಿಸುತ್ತದೆ. ಯಾವುದನ್ನೂ ತಿರಸ್ಕರಿಸುವುದಿಲ್ಲ. ಎಲ್ಲವನ್ನೂ ಸ್ವೀಕರಿಸುತ್ತದೆ. ಆದರೆ ಏನನ್ನೂ ಉಳಿಸಿಕೊಳ್ಳುವುದಿಲ್ಲ.
  —ಸ್ವಾಮಿ ಚಿನ್ಮಯಾನಂದ